ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** ಹಾಟ್‌ಲೈನ್ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರಿಗೆ ನೀಡುತ್ತಿರುವ ಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
1. ಪರಿಷ್ಕೃತ ವೇತನ ಮತ್ತು ಇತ್ಯಾದಿ ವಿಷಯಗಳ ಬಗ್ಗೆ ದಿನಾಂಕ: 02.03.2018 ರಂದು ಕವಿಪ್ರನಿನಿ ನೌಕರರ ಸಂಘ (ನೋ.ಸ.659) ಮತ್ತು ನಿಗಮದ ಆಡಳಿತ ವರ್ಗದ ನಡುವೆ ಆದ ಒಪ್ಪಂದ.
2. ಪರಿಷ್ಕೃತ ವೇತನ ಮತ್ತು ಇತ್ಯಾದಿ ವಿಷಯಗಳ ಬಗ್ಗೆ ದಿನಾಂಕ: 1.4.2017 ರಿಂದ ಜಾರಿಗೆ ಬರುವಂತೆ ನಿಗಮದ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಹೊರಡಿಸಲಾದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69516/2017-18 ಮತ್ತು ಕವಿಪ್ರನಿನಿ/ಬಿ16/69517/2017-18 ದಿನಾಂಕ: 09.03.2018.
3. ಮುಖ್ಯ ಇಂಜಿನಿಯರ್(ವಿ), ಆರ್.ಟಿ ಮತ್ತು ಆರ್ ಅಂಡ್ ಡಿ, ಕವಿಪ್ರನಿನಿ, ಬೆಂಗಳೂರು ರವರ ದಿನಾಂಕ: 08.12.2020 ರ ಪತ್ರ.
4. ನಿಗಮದ ಟಿಪ್ಪಣಿ ದಿನಾಂಕ: 29.01.2021

***

**ಪ್ರಸ್ತಾವನೆ:-**

ಹಾಟ್‌ಲೈನ್ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ರೇಡಿಯೇಷನ್ ಜೋನ್‌ನಲ್ಲಿ ಅತ್ಯಂತ ಅಪಾಯಕಾರಿ ಸನ್ನಿವೇಶಗಳಲ್ಲಿ ಕಾರ್ಯನಿರ್ವಹಿಸಬೇಕಾಗಿದ್ದು, ಕೆಲಸವು ತುಂಬಾ ಅಪಾಯಕಾರಿ ಹಾಗೂ ಜವಾಬ್ದಾರಿಯುತವಾಗಿರುತ್ತದೆ. ಹಾಟ್‌ಲೈನ್ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ಕುಂದುಕೊರತೆಗಳು ಹಾಗೂ ಸುರಕ್ಷತಾ ಸಾಮಗ್ರಿಗಳನ್ನು ಪೂರೈಸುವ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-3 ರಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಹಾಟ್‌ಲೈನ್ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರಿಗೆ ನೀಡುತ್ತಿರುವ ವೇತನ/ಭತ್ಯೆಗಳನ್ನು ಪರಿಷ್ಕರಿಸಿ ಪಾವತಿಸಲು ಅನುಮೋದನೆ ನೀಡಲಾಗಿದೆ. ಆದ್ದರಿಂದ ಈ ಆದೇಶ:-

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/86423/2018-19, ಬೆಂಗಳೂರು ದಿನಾಂಕ:** 27 APR 2021

ಹಾಟ್‌ಲೈನ್ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರಿಗೆ ನೀಡಬಹುದಾದ ಪರಿಷ್ಕೃತ ಭತ್ಯೆಗಳು ಈ ಕೆಳಕಂಡಂತಿವೆ:-

| ಕ್ರ. ಸಂ. | ಭತ್ಯೆಗಳ ವಿವರ | ಹಾಲಿ ಚಾಲ್ತಿಯಲ್ಲಿರುವುದು | | ಪರಿಷ್ಕೃತ ಭತ್ಯೆ | |
|---|---|---|---|---|---|
| | | ಅಧಿಕಾರಿ | ನೌಕರರು | ಅಧಿಕಾರಿ | ನೌಕರರು |
| 1 | ವಿಶೇಷ ವೇತನ | - | ರೂ.2,000/- | **ವಿಶೇಷ ಹಾಟ್‌ಲೈನ್ ಭತ್ಯೆ ರೂ.5,000/-** | **ವಿಶೇಷ ಹಾಟ್‌ಲೈನ್ ಭತ್ಯೆ ರೂ.5,000/-** |
| 2 | ವಿಶೇಷ ಕಾರ್ಯ ಭತ್ಯೆ | ಮೂಲ ವೇತನದ ಶೇ.5 ರಷ್ಟು, ಗರಿಷ್ಟ ರೂ.1500/-ರ ಮಿತಿಗೊಳಪಟ್ಟು | ಮೂಲ ವೇತನದ ಶೇ.5 ರಷ್ಟು, ಗರಿಷ್ಟ ರೂ.1500/-ರ ಮಿತಿಗೊಳಪಟ್ಟು | | |

| ಕ್ರ. ಸಂ. | ಭತ್ಯೆಗಳ ವಿವರ | ಹಾಲಿ ಚಾಲ್ತಿಯಲ್ಲಿರುವುದು | | ಪರಿಷ್ಕೃತ ಭತ್ಯೆ | |
|---|---|---|---|---|---|
| | | ಅಧಿಕಾರಿ | ನೌಕರರು | ಅಧಿಕಾರಿ | ನೌಕರರು |
| 3 | ಕ್ಯಾಂಪ್ ಭತ್ಯೆ | ಖಾಸಗಿ ಲಾಡ್ಜಿಂಗ್ ಮತ್ತು ಬೋರ್ಡಿಂಗ್ ಸೌಲಭ್ಯ ಅಥವಾ ಕವಿಪ್ರನಿನಿಯ ಅತಿಥಿ ಗೃಹಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ದಿನವೊಂದಕ್ಕೆ ರೂ.1000/– | | ನಿಗಮದ ಅತಿಥಿ ಗೃಹಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ **ಅತಿಥಿ ಗೃಹಗಳು ಲಭ್ಯವಿದ್ದು, ರೂಂಗಳು ಲಭ್ಯವಿಲ್ಲದಿದ್ದಲ್ಲಿ** ದಿನವೊಂದಕ್ಕೆ **ರೂ.1,000/–** | |
| 4 | ಅಧಿಕಾರಿ/ನೌಕರರಿಗೆ ಸುರಕ್ಷತಾ ಕನ್ನಡಕಗಳನ್ನು ಖರೀದಿಸುವ ಬಗ್ಗೆ | **ಅವಕಾಶ ಕಲ್ಪಿಸಲಾಗಿರುವುದಿಲ್ಲ.** | | ವಾರ್ಷಿಕವಾಗಿ ಗರಿಷ್ಟ **ರೂ.2,000/–** ರ ಮಿತಿಗೊಳಪಟ್ಟು.<br>(ಸದರಿ ಕನ್ನಡಕಗಳನ್ನು ಟಿ. ಮತ್ತು ಪಿ. ಖಾತೆಗೆ ಸೇರಿಸತಕ್ಕದ್ದಲ್ಲ ಮತ್ತು ಹಾಳಾಗುವ ಸಾಧನೆಗಳೆಂದು ಪರಿಗಣಿಸುವುದು) | |
| 5 | ಹಾಟ್‌ಸ್ಟಿಕ್/ಬೇರ್ ಹ್ಯಾಂಡ್ ಭತ್ಯೆ (ಹಾಟ್‌ಲೈನ್‌ನಲ್ಲಿ ಕೆಲಸ ನಿರ್ವಹಿಸಿದ ಪ್ರತಿ ದಿನಕ್ಕೆ) | **ರೂ.600/–** | **ರೂ.600/–** | – | **ರೂ.1000/–** |

ಇನ್ನುಳಿದಂತೆ, ನಿಗಮದ ದಿನಾಂಕ: 09.03.2018 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69516/ 2017–18 ಮತ್ತು ಕವಿಪ್ರನಿನಿ/ಬಿ16/69517/2017–18 ಗಳಿಗೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಈ ಮೇಲೆ ತಿಳಿಸಿರುವ ಪರಿಷ್ಕೃತ ದರಗಳು ದಿನಾಂಕ: 01.03.2021 ರಿಂದ ಜಾರಿಗೆ ಬರುತ್ತವೆ.

**'ನಿಗಮದ ನಿರ್ದೇಶಕರುಗಳ ಸಭೆಯ ಅನುಮೋದನೆಗೆ ಒಳಪಟ್ಟಿರುತ್ತದೆ'**

Sd/- 29/4/21

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.
   https://kptcl.karnataka.gov.in/ for information of:
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:–**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.